**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಉಡುಪಿ ಜಿಲ್ಲೆ, ಉಡುಪಿ</u>**

**<u>ಸೆಷನ್ಸ್ ಕೇಸ್ ನಂಃ 34/2025</u>**

**<u>ಇವರೊಳಗೆಃ</u>**

ಸರಕಾರದ ಪರವಾಗಿ ...... ಫಿರ್ಯಾದಿದಾರರು
ಪೊಲೀಸ್ ಉಪನಿರೀಕ್ಷಕರು-ಉಡುಪಿ ನಗರ ಪೊಲೀಸ್ ಠಾಣೆ

- ವಿರುದ್ಧ -

ನಾರಾಯಣ ....... ಆರೋಪಿ

ಆರೋಪಿಯ ಹೆಸರು : **ನಾರಾಯಣ**

ತಂದೆಯ ಹೆಸರು : **ವಿಠಲ**

ಪ್ರಾಯ : **29 ವರ್ಷ**

ಉದ್ಯೋಗ : **Tiles work**

ವಾಸಸ್ಥಳ : **ಮಾಬು ಸುಭಾನ್ ದರ್ಗಾದ ಹತ್ತಿರ, ಅಮಿನ್ ಬಾವಿ, ಬೈಲಹೊಂಗಲ ರಸ್ತೆ, ಧಾರವಾಡ**

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ-313 ರ ರೀತ್ಯಾ ಮಾಡುವ ಆರೋಪಿಯ ವಿಚಾರಣೆಃ</u>

ಪ್ರಶ್ನೆಃ 1 ನೀವು ಅಭಿಯೋಜನೆ ಸಾಕ್ಷಿದಾರರು ನ್ಯಾಯಾಲಯದ ಮುಂದೆ ನುಡಿದಿರುವಂತಹ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರಃ ಹೌದು , ಗೊತ್ತು

ಪ್ರಶ್ನೆಃ2 ಫ್ರಾಸಾ.3 ಮಲಕರಿಸಿದ್ದ ಮತ್ತು ಫ್ರಾಸಾ-4 ಹೊನ್ನಪ್ಪ ಇವರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಸುಮಾರು 8-9 ತಿಂಗಳ ಹಿಂದೆ ಕೂಲಿ ಕೆಲಸಕ್ಕಾಗಿ ಉಡುಪಿಗೆ ಬಂದಿದ್ದಾಗಿ, ಕೂಲಿ ಕೆಲಸ ಮಾಡಿ, ರಾತ್ರಿ ಶ್ರೀಕೃಷ್ಣ ಮಠದ ಬಳಿಯ ಪಾರ್ಕಿಂಗ್ ಏರಿಯಾದಲ್ಲಿ ಮಲಗುತ್ತಿದ್ದರೆಂದು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ:3 ಫ್ರಾ.ಸಾ.3 ಮತ್ತು 4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ತಾರೀಕು 20-03-2025 ರಂದು ರಾತ್ರಿ 9.30- 9.45 ರ ಸಮಯದಲ್ಲಿ ಮೊಬೈಲ್ ನೋಡಿಕೊಂಡು ಮಲಗಿದ್ದಾಗ, ಆರೋಪಿಯಾದ ನೀವು ಅವರ ಬಳಿ ಬಂದು ಮೊಬೈಲ್ ಕೇಳಿದ್ದು, ಅದನ್ನು ಅವರು ಕೊಡಲು ನಿರಾಕರಿಸಿದಾಗ, ನೀವು ಚಾಕು ತೆಗೆದುಕೊಂಡು, ಫ್ರಾಸಾ-3 ಮಲಕರಿಸಿದ್ದನಿಗೆ ಚುಚ್ಚಿದ್ದೀರಿ, ಆತನನ್ನು ಬಿಡಿಸಲು ಬಂದ ಫ್ರಾಸಾ-4 ಹೊನ್ನಪ್ಪ ಈತನಿಗೂ ಸಹ ಚಾಕುವಿನಿಂದ ಚುಚ್ಚಿದ್ದೀರಿ ಎಂದು ಮತ್ತು ಬಿಡಿಸಲು ಬಂದಿದ್ದ ಇನ್ನೊಬ್ಬ ವ್ಯಕ್ತಿಗೂ ಸಹ ಹಲ್ಲೆ ಮಾಡಿದ್ದೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ: 4 ಫ್ರಾ.ಸಾ.3 ಮತ್ತು 4 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಅವರನ್ನು ಅಲ್ಲಿ ಸೇರಿದ್ದ ಜನರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದರೆಂದು, ಪೊಲೀಸರು ಆಸ್ಪತ್ರೆಗೆ ಬಂದಾಗ ಅಲ್ಲಿ ನಿಪಿ-6 ರ ದೂರನ್ನು ಕೊಟ್ಟಿದ್ದರೆಂದು ಮತ್ತು ಹಲ್ಲೆಯ ದಿನ ತೊಟ್ಟಿದ್ದ ರಕ್ತದ ಕಲೆಯಾಗಿದ್ದ ಬಟ್ಟೆಗಳನ್ನು ಸಹ ಪೊಲೀಸರಿಗೆ ಕೊಟ್ಟಿದ್ದರೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸುಳ್ಳು

ಪ್ರಶ್ನೆ:5 ಫ್ರಾಸಾ-6 ನಂಧ್ಯಪ್ಪ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಚಾಸಾ-1 ಮತ್ತು 2 ಇವರಿಗೆ 2025 ರ ಮಾರ್ಚ್ ತಿಂಗಳಿನಲ್ಲಿ ಉಡುಪಿಯಲ್ಲಿ ಚಾಕುವಿನಿಂದ ಹಲ್ಲೆಯಾಗಿದ್ದು, ಅದಕ್ಕಾಗಿ ಅವರು ಉಡುಪಿಯ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಗ್ಗೆ ತಿಳಿದು, ಆಸ್ಪತ್ರೆಗೆ ಹೋಗಿ ಅವರನ್ನು ನೋಡಿದ್ದರೆಂದು. ಮಾರನೇ ದಿನ ಪೊಲೀಸರು ಘಟನೆ ನಡೆದ ಜಾಗೆಗೆ ಅವರನ್ನು ಮತ್ತು ಚಾಸಾ-6 ಈತನನ್ನು ಕರೆದುಕೊಂಡು ಹೋಗಿ, ಅಲ್ಲಿ ಚಾಸಾ-2 ತೋರಿಸಿದ ಜಾಗೆಯನ್ನು ನಿಪಿ-8 ರಂತೆ ಮಹಜರು ಮಾಡಿದ್ದು, ಅದಕ್ಕೆ ಸಹಿ

ಮಾಡಿದ್ದರೆಂದು,ಆಗ ತೆಗೆದ ಪೋಟೋ ನಿಪಿ-9 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ:6 ಫ್ರಾಸಾ-2 ಅನ್ಸಾರ್ ಅಹಮದ್ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಾರೀಕು 24-03-2025 ರಂದು ಉಡುಪಿ ನಗರ ಠಾಣೆಯಲ್ಲಿ ಆರೋಪಿಯಾದ ನೀವು ಕೃಷ್ಣ ಮಠದ ಬಳಿ ಚಾಕುವಿನಿಂದ ಹಲ್ಲೆ ಮಾಡಿದ್ದೀರಿ ಎಂಬ ಕಾರಣಕ್ಕಾಗಿ ನಿಮ್ಮನ್ನು ಮಧ್ಯಾಹ್ನ 12.30 ರಿಂದ 1.00 ಗಂಟೆಯ ಸಮಯದಲ್ಲಿ ದಸ್ತಗಿರಿ ಮಾಡಿ, ನಿಪಿ-2 ರ ಪಂಚನಾಮೆ ಮಾಡಿ ಅವರ ಸಹಿ ಪಡೆದಿದ್ದರೆಂದು. ನಂತರ ನೀವು ಅವರನ್ನು ಮತ್ತು ಪೊಲೀಸರನ್ನು ಹಲ್ಲೆ ಮಾಡಿದ ಜಾಗೆ ತೋರಿಸುವುದಾಗಿ ಹೇಳಿ ಕೃಷ್ಣಮಠದ ಬಳಿ ಇರುವ ಜಾಗೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಪೊಲೀಸರು ನಿಪಿ-3 ರ ಮಹಜರು ಬರೆದು ಅವರ ಸಹಿ ಪಡೆದಿದ್ದರೆಂದು, ಆಗ ತೆಗೆದ ಪೋಟೋ ನಿಪಿ-4 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:7 ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ನಂತರ ಅದೇ ದಿನ ಸಂಜೆ 5.30 ರಿಂದ 6.00 ಗಂಟೆಯ ಸಮಯದಲ್ಲಿ ಠಾಣೆಯಲ್ಲಿ ನೀವು ಹಾಜರುಪಡಿಸಿದ ಚಾಕು ಮತ್ತು ಪೊಲೀಸ್ ಸಿಬ್ಬಂದಿಗಳು ಹಾಜರುಪಡಿಸಿದ ಬಟ್ಟೆಗಳನ್ನು ನಿಪಿ-5 ಪಂಚನಾಮೆ ಅಡಿಯಲ್ಲಿ ಮಹಜರು ಮಾಡಿ ಅಮಾನತುಪಡಿಸಿಕೊಂಡಿದ್ದರೆಂದು, ಸದರಿ ಚೂರಿ ಮತ್ತು ಬಟ್ಟೆಗಳು ಎಂಒ-1 ರಿಂದ 3 ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:8 ಫ್ರಾಸಾ-7 ಡಾಃ ಕೆ.ಕೆ. ಜೀವನ್ ಪ್ರಕಾಶ್, ವೈದ್ಯಾಧಿಕಾರಿಗಳು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕಃ 20-03-2025 ರಂದು ರಾತ್ರಿ 10.30

ತಾನು ಗಾಯಾಳುವಾದ ಚಾಸಾ-1 ಮಲಕರಿಸಿದ್ದ ಕಂಬಗಿ ಈತನನ್ನು ಪರೀಕ್ಷಿಸಲಾಗಿ, ಅವರ ಹೊಟ್ಟೆಯ ಕೆಳಭಾಗದಲ್ಲಿ ಮತ್ತು ಎದೆಯ ಎಡಭಾಗದಲ್ಲಿ ಸಾದಾ ಸ್ವರೂಪದ ಗಾಯಗಳು ಕಂಡು ಬಂದಿರುವುದಾಗಿ, ಈ ಬಗ್ಗೆ ನಿಪಿ.11 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆಃ9 ಫ್ರಾಸಾ-7 ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ರಾತ್ರಿ 11.35 ಗಂಟೆಗೆ ಆರೋಪಿಯಾದ ನಿಮ್ಮನ್ನು ಸ್ವಯಂ ಆಗಿ ಮಾಡಿಕೊಂಡ ಗಾಯಗಳಿಗಾಗಿ ಪೊಲೀಸರು ಕರೆತಂದಿದ್ದರೆಂದು, ನಿಮ್ಮನ್ನು ಪರೀಕ್ಷಿಸಲಾಗಿ, ನಿಮ್ಮ ಎಡಗೈ ಹೆಬ್ಬೆರಳಿನ ಬೆನ್ನಿನ ಬುಡದಲ್ಲಿ 1.5 ಸೆಂ.ಮೀ x 0.5 ಸೆಂ.ಮೀ ಅಳತೆಯ ಸೀಳುವಿಕೆ ಗಾಯವಾಗಿತ್ತು, ಈ ಬಗ್ಗೆ ನಿಪಿ.12 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಸರಿ ಅಲ್ಲ

ಪ್ರಶ್ನೆಃ 10 ಫ್ರಾಸಾ-7 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ತಾರೀಕು 21-03-2025 ರಂದು ಸಂಜೆ 6.33 ಗಂಟೆಗೆ ಅದೇ ದಿನ ಪ್ರಕರಣದ ಇನ್ನೊಬ್ಬ ಗಾಯಾಳು ಚಾಸಾ-2 ಹೊನ್ನಪ್ಪ ಅವರನ್ನು ಪರೀಕ್ಷಿಸಲಾಗಿ, ಆತನ ಎಡಕಿವಿಯ ಮುಂಭಾಗದಲ್ಲಿ ಕತ್ತರಿಸಿದ ಗಾಯ, ಕೆಳಗಿನ ಪಕ್ಕೆಲುಬಿನ ಗಡಿಯ ಬಳಿ ಎದೆಯ ಎಡಭಾಗದಲ್ಲಿ ಸುಮಾರು 1 ಸೆಂ.ಮೀ x 0.5 ಸೆಂ.ಮೀ ಅಳತೆಯ ಕತ್ತರಿಸಿದ ಗಾಯ. ಮೇಲಿನ ತೋಳಿನ ಹಿಂಭಾಗದಲ್ಲಿ 1x 0.5 ಸೆಂ.ಮೀ ಅಳತೆಯ ಕತ್ತರಿಸಿದ ಕತ್ತರಿಸಿದ ಗಾಯ , ಎಡ ಪಾರ್ಶ್ವ, ಕುತ್ತಿಗೆಯ ಭಾಗದಲ್ಲಿ ಗಾಯವಾಗಿತ್ತು, ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿತ್ತು ಈ ಬಗ್ಗೆ ತಾವು ನಿಪಿ.13 ರಂತೆ ಗಾಯದ ಪ್ರಮಾಣ

ಪತ್ರವನ್ನು ನೀಡಿದ್ದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ: 11 ಫ್ರಾಸಾ-7 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ತನಿಖಾಧಿಕಾರಿಗಳ ಕೋರಿಕೆಯಂತೆ ಕೃತ್ಯಕ್ಕೆ ಬಳಸಿದ್ದ ಎಂಒ-1 ಚೂರಿಯನ್ನು ಪರೀಕ್ಷಿಸಿ ವರದಿ ನೀಡಿದ್ದು, ಸದರಿ ಚೂರಿಯಿಂದ ಹಲ್ಲೆಗೊಳಗಾದಲ್ಲಿ ಚಾಸಾ-1 ಮತ್ತು 2 ಇವರ ಗಾಯದ ಪ್ರಮಾಣ ಪತ್ರ ನಿಪಿ 11 ಮತ್ತು ನಿಪಿ.13 ರಲ್ಲಿ ನಮೂದಿಸಿರುವಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:12 ಫ್ರಾಸಾ-8 ಡಾಃ ಗೀತಾಲಕ್ಷ್ಮೀ ಪಿ., ಸಹಾಯಕ ನಿರ್ದೇಶಕರು, ಆರ್.ಎಫ್.ಎಸ್.ಎಲ್., ಮಂಗಳೂರು ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 05-04-2025 ರಂದು ತನಿಖಾಧಿಕಾರಿಗಳು ಕಳುಹಿಸಿದ 3 ವಸ್ತುಗಳನ್ನು ಪರೀಕ್ಷೆ ಮಾಡಿದಾಗ, ವಸ್ತು ಸಂಖ್ಯೆ 1, 2 ಮತ್ತು 3 ರಲ್ಲಿ ರಕ್ತದ ಕಲೆ ಪತ್ತೆಯಾಗಿದ್ದು, ಅದು ಮಾನವ ರಕ್ತವಾಗಿತ್ತು. ವಸ್ತು ಸಂಖ್ಯೆ 2 ಮತ್ತು 3 ರಲ್ಲಿ ಇದ್ದ ರಕ್ತದ ಗುಂಪು ''ಎ' ಗುಂಪಿಗೆ ಸೇರಿತ್ತು. ಅದಕ್ಕಾಗಿ ನಿಶಾನೆ ಪಿ-16 ರಂತೆ ವರದಿ ನೀಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಸುಳ್ಳು

ಪ್ರಶ್ನೆ:13 ಫ್ರಾಸಾ-9 ಸುಷ್ಮಾ ಮಹಿಳಾ ಹೆಚ್.ಸಿ. ಉಡುಪಿ ನಗರ ಪೊಲೀಸ್ ಠಾಣೆ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 23-03-2025 ರಂದು ನಿಪಿ-8 ರ ಸ್ಥಳ ಮಹಜರು ಮಾಡುವಾಗ ಮತ್ತು ದಿನಾಂಕ 24-03-2025 ರಂದು ಆರೋಪಿಯ ದಸ್ತಗಿರಿ ಸಮಯ, ಮತ್ತು ಆರೋಪಿ ಕೃತ್ಯಕ್ಕೆ

ಬಳಸಿದ ಚಾಕುವನ್ನು ಹಾಜರುಪಡಿಸಿದ ಸಮಯದಲ್ಲಿ, ನಿಶಾನೆ ಪಿ-9, ನಿಪಿ-4, ಮತ್ತು 18ರ ಫೋಟೋಗಳನ್ನು ಅವರ ಮೊಬೈಲ್ ನಲ್ಲಿ ತೆಗೆದಿದ್ದು, ಅದಕ್ಕಾಗಿ ನಿಪಿ-19ರಂತೆ ಸಾಕ್ಷ್ಯ ಅಧಿನಿಯಮ ಕಲಂ 65ರಂತೆ ಪ್ರಮಾಣ ಪತ್ರ ನೀಡಿದ್ದರೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:14 ಫ್ರಾಸಾ-10 ಸಂತೋಷ್ , ಮುಖ್ಯಪೇದೆ, ಉಡುಪಿ ನಗರ ಠಾಣೆ ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 21-03-2025ರಂದು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 2.00 ಗಂಟೆಗೆ ಅಜ್ಜರಕಾಡು ಆಸ್ಪತ್ರೆಯಿಂದ ಬಂದ ಪೋನ್ ಕರೆಯಂತೆ, ಆಸ್ಪತ್ರೆಗೆ ಹೋಗಿ ಅಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಚಾಸಾ-1 ನ್ನು ವಿಚಾರಿಸಿ, ಆತ ನೀಡಿದ ಲಿಖಿತ ದೂರು ನಿಪಿ-6 ನ್ನು ಪಡೆದು, ಠಾಣೆಗೆ ಬಂದು, ಗುನ್ನೆ ನಂಬ್ರ 53/25ರಂತೆ ಪ್ರಕರಣ ದಾಖಲಿಸಿ, ನಿಪಿ-20ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸರಿ ಅಲ್ಲ

ಪ್ರಶ್ನೆ:15 ಫ್ರಾಸಾ-11 ಭರತೇಶ್, ಪೊಲೀಸ್ ಉಪನಿರೀಕ್ಷಕರು, ಇವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 22-03-2025ರಂದು ಈ ಪ್ರಕರಣದ ಕಡತವನ್ನು ಚಾಸಾ-13 ಇವರಿಂದ ಪಡೆದು, ಪರಿಶೀಲಿಸಿ, ತಾರೀಕು 23-03-2025ರಂದು ಚಾಸಾ-2 ತೋರಿಸಿದ ಜಾಗೆಯನ್ನು ಪಂಚರ ಸಮಕ್ಷಮ ನಿಪಿ-8ರಂತೆ ಮಹಜರು ಮಾಡಿದ್ದರೆಂದು, ಆಗ ತೆಗೆದ ಪೋಟೋ ನಿಪಿ-9. ಅದೇ ದಿನ ಚಾಸಾ-1 ಇವರ ಮರುಹೇಳಿಕೆ, ಚಾಸಾ-2, 3, 4,ಇವರ ಹೇಳಿಕೆ ಪಡೆದಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸರಿ ಅಲ್ಲ

ಪ್ರಶ್ನೆ:16 ಫ್ರಾಸಾ-11 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕ 24-03-2025 ರಂದು ಆರೋಪಿಯಾದ ನಿಮ್ಮನ್ನು ದಸ್ತಗಿರಿ ಮಾಡಿ, ನಿಪಿ-2 ರಂತೆ ಪಂಚನಾಮೆ ಬರೆದು, ನಿಮ್ಮ ಹೇಳಿಕೆ ದಾಖಲಿಸಿದ್ದರೆಂದು, ನಿಮ್ಮ ಹೇಳಿಕೆಯಂತೆ ನೀವು ಪೊಲೀಸರನ್ನು, ಪಂಚರನ್ನು ಹಲ್ಲೆ ಮಾಡಿದ ಜಾಗೆಯನ್ನು ತೋರಿಸಿದ್ದು, ಅಲ್ಲಿ ನಿಪಿ-3 ರಂತೆಪಂಚನಾಮೆ ಬರೆದು, ನಿಪಿ.4 ರ ಪೋಟೋ ತೆಗೆದಿದ್ದರೆಂದು, ನಂತರ ಠಾಣೆಗೆ ಬಂದು ನೀವು ಕೃತ್ಯಕ್ಕೆ ಬಳಸಿದ್ದ ಎಂಒ-1 ರ ಚೂರಿಯನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ನಿಪಿ-5 ರಂತೆ ಪಂಚನಾಮೆ ಮಾಡಿ ಜಪ್ತು ಮಾಡಿದ್ದರೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:ಸುಳ್ಳು

ಪ್ರಶ್ನೆ:17 ಫ್ರಾಸಾ-11 ಇವರು ತಮ್ಮ ಮುಂದುವರಿದ ಸಾಕ್ಷಿ ವಿಚಾರಣೆಯಲ್ಲಿ ಚಾಸಾ-2 ಮತ್ತು 2 ಇವರ ಗಾಯದ ಪ್ರಮಾಣ ಪತ್ರ ನಿಪಿ-11 ಮತ್ತು 13, ಆಯುಧಗಳನ್ನು ತಪಾಸಣೆ ಮಾಡಿದ ವೈದ್ಯರಿಂದ ಪಡೆದ ವರದಿ ನಿಪಿ-14 ಮತ್ತು ತನಿಖೆಯ ಸಮಯದಲ್ಲಿ ತೆಗೆದಿದ್ದ ಪೋಟೋಗಳಿಗೆ ಪ್ರಮಾಣ ಪತ್ರವನ್ನು ಚಾಸಾ-11 ಇವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: ಸರಿ ಅಲ್ಲ

ಪ್ರಶ್ನೆ:18 ಫ್ರಾ.ಸಾ.12 ನಾರಾಯಣ ಬಿ., ಪೊಲೀಸ್ ಉಪನಿರೀಕ್ಷಕರು ಇವರು ಸಾಕ್ಷಿ ತಾರೀಕು ಈ ಪ್ರಕರಣದ ಕಡತವನ್ನು ತಾರೀಕು 09-05-2025 ರಂದು ಚಾಸಾ-14 ಇವರಿಂದ ಪಡೆದು, ಪರಿಶೀಲಿಸಿ, ತಾರೀಕು 20-05-2025 ರಂದು ಎಫ್ ಎಸ್ ಎಲ್ ವರದಿ ನಿಪಿ-16, ತಾರೀಕು 26-05-2025 ರಂದು ಚಾಸಾ-1, 2, ಆರೋಪಿಯ ಗಾಯದ ಪ್ರಮಾಣ ಪತ್ರ ನಿಪಿ-11, 12, 13 ಮತ್ತು ದಿನಾಂಕ 09-06-2025 ರಂದು ವೈದ್ಯರು ನೀಡಿದ

ನಿಪಿ-14 ಮತ್ತು 15 ರ ಎಂಒ-1 ರ ಬಗ್ಗೆ ನೀಡಿದ ಅಭಿಪ್ರಾಯ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡು, ನಂತರ ತನಿಖೆಯನ್ನು ಪೂರೈಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃಇಲ್ಲ ಸರಿ ಅಲ್ಲ

ಪ್ರಶ್ನೆಃ19 ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?

ಉತ್ತರಃ ನನಗೆ ನನ್ನ ಟೈಲ್ಸ ಕೆಲಸದಲ್ಲಿ ಗಾಯವಾಗಿತ್ತು

ಪ್ರಶ್ನೆಃ20 ನಿಮ್ಮ ಪರವಾಗಿ ಯಾರನ್ನಾದರೂ ವಿಚಾರಣೆ ಮಾಡುತ್ತೀರಾ?

ಉತ್ತರಃ ಇಲ್ಲ

(ಆರೋಪಿತನಿಗೆ ಈ ಮೇಲಿನ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿತನಿಂದ ಬಂದಂತಹ ಉತ್ತರಗಳನ್ನು ಸ್ವತಃ ಬರೆದುಕೊಳ್ಳ ಲಾಯಿತು ಎಂದು ದೃಢೀಕರಿಸುತ್ತೇನೆ)

Sd/-

ದಿನಾಂಕಃ 07-03-2026.

(ಕೆ.ಎಸ್. ಗಂಗಣ್ಣವರ್ )
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ